ಈ ಲೇಖನದ ವಿಷಯಾನುಕ್ರಮಣಿಕೆ


ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ 2

ಹತ್ತನೆಯ ಪದ್ಯ 2

ಮಂಗಳಾತ್ಮಕ 2

ದುರಿತತಿಮಿರಪತಂಗ 3

ಗರುಡತುರಂಗ 3

ರಿಪುಮದಭಂಗ 4

ಕೀರ್ತಿತರಂಗ 5

ಪುರಹರಸಂಗ 6

ನೀಲಾಂಗ 7

ಅಂಗದಪ್ರಿಯ 7

ಅನಂಗಪಿತ 8

ಕಾಳಿಂಗಮರ್ದನ 8

ಅಮಿತಕರುಣಾಪಾಂಗ 13

ಶ್ರೀನರಸಿಂಗ 13

## ವಿಶ್ವನಂದಿನಿ ಲೇಖನಮಾಲೆ — 37

# ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ
# ಹತ್ತನೆಯ ಪದ್ಯ

**ಮಂಗಳಾತ್ಮಕ ದುರಿತತಿಮಿರಪ-**
**ತಂಗ ಗರುಡತುರಂಗ ರಿಪುಮದ-**
**ಭಂಗ ಕೀರ್ತಿತರಂಗ ಪುರಹರಸಂಗ ನೀಲಾಂಗ |**
**ಅಂಗದಪ್ರಿಯನಂಗಪಿತ ಕಾ-**
**ಳಿಂಗಮರ್ದನ ಅಮಿತಕರುಣಾ-**
**ಪಾಂಗ ಶ್ರೀನರಸಿಂಗ ರಕ್ಷಿಸು ನಮ್ಮನನವರತ || ೧೦ ||**

## ಮಂಗಳಾತ್ಮಕ

ಆತ್ಮ ಎಂದರೆ ಚೇತನ. ಆತ್ಮ ಎಂದರೆ ದೇಹ. ಆತ್ಮ ಎಂದರೆ ಮನಸ್ಸು. ಪರಮಾತ್ಮ ಅವನ ದೇಹ ಮತ್ತು ಅವನ ಮನಸ್ಸು ಮೂರೂ ಪದಾರ್ಥಗಳು ಪರಸ್ಪರ ಅಭಿನ್ನ. ಪರಮಪವಿತ್ರವಾದ ದೇಹ ಮನಸ್ಸುಳ್ಳವನು, ಅಪವಿತ್ರವಾದ ಸಾಂಸಾರಿಕ ಪದಾರ್ಥಗಳ ಸೋಂಕಿಲ್ಲದವನು. ಮಂಗಳಾತ್ಮಕ.

## ದುರಿತತಿಮಿರಪತಂಗ

ಅದಕ್ಕಾಗಿಯೇ ಅವನು ಮತ್ತೊಬ್ಬರ ಪಾಪಗಳನ್ನೂ ಪರಿಹರಿಸಬಲ್ಲ. ಪ್ರಖರಪ್ರಕಾಶವನ್ನು ಹೊಂದಿರುವ ಸೂರ್ಯ ಬೆಳಕಿನ ವಿರುದ್ಧವಸ್ತುವಾದ ಕತ್ತಲೆಯನ್ನು ಕಳೆಯುವಂತೆ ಪರಮಮಂಗಳನಾದ ಭಗವಂತ ಅಮಂಗಳವಾದ ಭಕ್ತರ ಸಂಸಾರವನ್ನೇ ವಿನಾಶಮಾಡುತ್ತಾನೆ. ಪತಂಗ ಎಂದರೆ ಸೂರ್ಯ. “ಪತಂಗೌ ಪಕ್ಷಿಸೂರ್ಯೌ ಚ” ತಿಮಿರ ಎಂದರೆ ಕತ್ತಲೆ. ದುರಿತ ಎಂದರೆ ಪಾಪ. ಪಾಪಗಳೆಂಬ ಕತ್ತಲೆಯನ್ನು ಕಳೆಯುವಲ್ಲಿ ಸೂರ್ಯನಂತಿರುವವನು ಎಂದರ್ಥ.

## ಗರುಡತುರಂಗ

ತುರಂಗ ಎಂದರೆ ಕುದುರೆ. ತುರ ಎಂದರೆ ವೇಗವಾಗಿ ಗ ಎಂದರೆ ಹೋಗುವಂತದ್ದು ಆದ್ದರಿಂದ ವೇಗವಾಗಿ ಓಡುವ ಕುದುರೆಗೆ ತುರಂಗ ಎಂದು ಹೆಸರು. ಅತ್ಯಂತ ವೇಗವಾಗಿ ಹೋಗುವ ಗರುಡನೂ ಆ ಅರ್ಥದಲ್ಲಿ ತುರಂಗನೇ.

ಆ ಗರುಡ ಕೇವಲ ಪಕ್ಷಿರೂಪದಲ್ಲಿಯಷ್ಟೇ ಅಲ್ಲ, ರಥ, ಕುದುರೆ ವಿಮಾನಾದಿಗಳ ರೂಪದಲ್ಲಿಯೂ ಪರಮಾತ್ಮನನ್ನು ಹೊತ್ತು ತಿರುಗಾಡುತ್ತಾನೆ. ಗರುಡ ಬಂಗಾರದ ರಥದ ರೂಪವನ್ನು ಸ್ವೀಕರಿಸಿದಾಗ ರಥಕ್ಕೊಂದು ಧ್ವಜ ಬೇಕಲ್ಲ, ಪರಮಾತ್ಮ ಗರುಡನನ್ನೇ ಧ್ವಜವನ್ನಾಗಿ ಮಾಡಿಕೊಳ್ಳುತ್ತಾನೆ. ಶ್ರೀಮದಾಚಾರ್ಯರೂ ಪರಮಾತ್ಮನನ್ನು ಈ ರೀತಿ ಸ್ತೋತ್ರ ಮಾಡುತ್ತಾರೆ “ನಮಸ್ತೇ ಗರುಡಧ್ವಜ”

## ರಿಪುಮದಭಂಗ

ರಿಪುಗಳ ಮದವನ್ನು ಅಹಂಕಾರವನ್ನು ಭಂಗಗೊಳಿಸುವವನು ಮುರಿಯುವವನು ಎಂದರ್ಥ. ಹಿರಣ್ಯಕಶಿಪು ವಿಧವಿಧವಾದ ರೀತಿಗಳನ್ನು ಉಲ್ಲೇಖಿಸಿ ಯಾವ ರೀತಿಯಲ್ಲಿಯೂ ತನಗೆ ಮರಣ ಬರಬಾರದು ಎಂದು ಬೇಡಿಕೊಳ್ಳುತ್ತಾನೆ. ಪರಮಾತ್ಮ ಮನುಷ್ಯನು ಅಲ್ಲದೇ ಪ್ರಾಣಿಯೂ ಅಲ್ಲದೆ ನರಸಿಂಹನಾಗಿ, ಹಗಲೂ ಅಲ್ಲದ ರಾತ್ರಿಯೂ ಅಲ್ಲದ ಸಂಧ್ಯಾಕಾಲದಲ್ಲಿ, ಭೂಮಿಯೂ ಅಲ್ಲದ ಅಂತರಿಕ್ಷವೂ ಅಲ್ಲದ ತನ್ನ ತೊಡೆಯ ಮೇಲೆ

ಅವನನ್ನು ಹಾಕಿಕೊಂಡು ಆಯುಧವಲ್ಲದ ತನ್ನ ಉಗುರಿನಿಂದ ಸೀಳಿ ಅವನನ್ನು ಕೊಂದೇ ಬಿಡುತ್ತಾನೆ. ಆ ಮೂಲಕ ನನಗೆ ಯಾರಿಂದಲೂ ಸಾವಿಲ್ಲ ಎಂದು ಬೀಗುತ್ತಿದ್ದ ಅವನ ಅಹಂಕಾರವನ್ನು ವಿನಾಶ ಮಾಡಿಬಿಡುತ್ತಾನೆ. ಹಾಗೆಯೇ ರಾವಣ ಯಾರಿಂದಲೂ ತನಗೆ ಮರಣ ಬರಬಾರದು ಎಂದು ವರವನ್ನು ಪಡೆಯುವಾಗ ಕ್ಷುದ್ರಬಲದ ಮನುಜರೇನು ಮಾಡಿಯಾರು ? ವಿಚಿತ್ರಚೇಷ್ಟೆಯ ಕಪಿಗಳೇನು ಮಾಡಿಯಾವು ಎಂದು ಯೋಚಿಸಿ ನರ ವಾನರರನ್ನು ಮಾತ್ರ ತನ್ನ ಪಟ್ಟಿಗೆ ಸೇರಿಸಿರುವದಲ್ಲ. ಪರಮಾತ್ಮ ತಾನು ನರರೂಪದಲ್ಲಿ ಬಂದು ದೇವತೆಗಳನ್ನು ವಾನರರೂಪದಲ್ಲಿ ಕರೆದುಕೊಂಡು ಬಂದು ಅವನನ್ನು ಕೊಂದು ಅವನ ಮದವನ್ನು ಹಿಂಗಿಸುತ್ತಾನೆ.

## ಕೀರ್ತಿತರಂಗ

ಕೀರ್ತಿ ಎಂದರೆ ಯಶಸ್ಸು. ತರಂಗ ಎಂದರೆ ಅಲೆ. ಸಮುದ್ರದಲ್ಲಿನ ಅಲೆಗಳಂತೆ ತನ್ನ ಅವತಾರಕಾಲದಿಂದ ಪರಂಧಾಮ

ಪ್ರವೇಶಿಸುವವರೆಗೆ ತನ್ನನ್ನು ಕಂಡ ಭಕ್ತರಿಗೆ ಸಾಕ್ಷಾತ್ತಾಗಿ, ಪರಂಧಾಮ ಪ್ರವೇಶಿಸಿದಂದಿನಿಂದ ಇಂದಿನವರೆಗೆ ತನ್ನನ್ನು ಭಜಿಸುವ ಜನರಿಗೆ ಭಾಗವತಾದಿ ಶಾಸ್ತ್ರಗಳ ಮುಂಖಾಂತರ ತನ್ನನ್ನು ಯಶಸ್ಸನ್ನು ತೋರುತ್ತಾ ಬಂದವನು.

## ಪುರಹರಸಂಗ

ತ್ರಿಪುರಾಸುರರನ್ನು ಕೊಂದ ಕಾರಣಕ್ಕೆ ರುದ್ರದೇವರಿಗೆ ಪುರಹರ ಎಂದು ಹೆಸರು. ಸದಾ ಅವರ ಸಂಗಡವಿರುವವನು. ಪುರಹರಸಂಗ.

ನಾರಾಯಣಪಂಡಿತಾಚಾರ್ಯರು ಶಿವಸ್ತುತಿಯಲ್ಲಿ ಹರಿ ಹರರ ಸಂಗವನ್ನು ತುಂಬ ಸುಂದರವಾಗಿ ವರ್ಣಿಸಿದ್ದಾರೆ. “ಪಯಸ್ಯುಪಹಿತಂ ಘೃತಂ ಸ್ವಯಮಿವ ಶ್ರಿಯೋ ವಲ್ಲಭಮ್” ಹಾಲಿನಲ್ಲಿ ತುಪ್ಪವಿದ್ದ ಹಾಗೆ ಹರನಲ್ಲಿ ಹರಿ ಸೇರಿದ್ದಾನೆ. ಹಾಲಿಲ್ಲದೇ ಇದ್ದರೆ ತುಪ್ಪ ದೊರೆಯಲು ಸಾಧ್ಯವಿಲ್ಲ. ಭಗವಂತನನ್ನು ಹೊಂದಬೇಕಾದರೇ ಮಹಾಶಿವನನನ್ನು ಆರಾಧಿಸಲೇ ಬೇಕು. ತುಪ್ಪವಿಲ್ಲದಿದ್ದರೆ ಹಾಲಿಗೆ ಅಸ್ತಿತ್ವವೇ ಇಲ್ಲ. ಹಾಲು

ರುಚಿಯಾಗುವದೇ ಅದರಲ್ಲಿನ ತುಪ್ಪದ ಅಂಶದಿಂದ. ಹೀಗೆ ಹಾಲು ತುಪ್ಪಗಳಂತೆ ಹರ ಹರಿಯರು ಬೆರೆತಿದ್ದಾರೆ. ಶ್ರೀಹರಿ ಪುರಹರನ ಸಂಗದಲ್ಲಿದ್ದಾನೆ.

## ನೀಲಾಂಗ

ನೀಲ ಎಂದರೆ ಕಪ್ಪು. ಅಂಗ ಎಂದರೆ ದೇಹ. ಕಡುಗಪ್ಪಾದ ಬಣ್ಣದ ದೇಹವುಳ್ಳ ಶ್ರೀಕೃಷ್ಣ ನೀಲಾಂಗ.

## ಅಂಗದಪ್ರಿಯ

ಇಂದ್ರ ವಾಲಿಯಾಗಿ ಅವತರಿಸಿ ಬಂದಾಗ ಸೂರ್ಯ ಅವನ ತಮ್ಮನಾಗಿ ಸುಗ್ರೀವನಾಗಿ ಹುಟ್ಟಿ ಬಂದಿರುತ್ತಾನೆ. ಚಂದ್ರ ವಾಲಿಯ ಮಗನಾಗಿ ಅಂಗದ ಎಂಬ ಹೆಸರಿನಿಂದ ಹುಟ್ಟಿ ಬಂದಿರುತ್ತಾನೆ. ಭೂಭಾರಹರಣದಲ್ಲಿ ಶ್ರೀರಾಮನಿಗೆ ಸೇವೆಯನ್ನು ಸಲ್ಲಿಸಬೇಕೆಂದು ಚಂದ್ರ ಅಂಗದನಾಗಿ ಹುಟ್ಟಿ ಅದ್ಭುತವಾದ ಪರಾಕ್ರಮವನ್ನು ಲಂಕಾಯುದ್ಧದಲ್ಲಿ ತೋರಿ ರಾಮನ ಸೇವೆಗೈದು ತನಗಿರುವ ರಾಮಭಕ್ತಿಯನ್ನು ರಾಮಪ್ರೇಮವನ್ನು

ತೋರಿಸಿರುತ್ತಾನೆ. ವಾಲಿಯನ್ನು ಕೊಲ್ಲಿಸಿ ಸುಗ್ರೀವ ಸಂಪಾದಿಸಿದ್ದ ರಾಜ್ಯವನ್ನು ಪರಮಾತ್ಮ ಕಡೆಯಲ್ಲಿ ಅಂಗದನ ಮೇಲಿನ ಪ್ರೇಮದಿಂದ ಅಂಗದನಿಗೇ ನೀಡಿಸುತ್ತಾನೆ.

## ಅನಂಗಪಿತ

ಅಂಗ ಎಂದರೆ ದೇಹ. ಅನಂಗ ಎಂದರೆ ದೇಹವಿಲ್ಲದವನು. ರುದ್ರದೇವರು ವೈರಾಗ್ಯದಿಂದ ತಪಸ್ಸು ಮಾಡುತ್ತಿರುವ ಸಂದರ್ಭದಲ್ಲಿ ಅವರಲ್ಲಿ ಕಾಮವನ್ನು ಪ್ರಚೋದಿಸ ಹೋಗಿ ಅವರ ಕಣ್ಣಿನ ಬೆಂಕಿಯಿಂದ ಸುಟ್ಟು ಬೂದಿಯಾಗುವ ಕಾಮನಿಗೆ ಅನಂಗ ಎಂದು ಹೆಸರು. ಆ ಕಾಮನಿಗೆ ತಂದೆಯಾದ ಕಾರಣ ಶ್ರೀಹರಿಗೆ ಅನಂಗಪಿತ ಎಂದು ಹೆಸರು.

## ಕಾಳಿಂಗಮರ್ದನ

ಕಾಳಿಂಗ ಎನ್ನುವದು ಒಂದು ಹಾವಿನ ಹೆಸರು. ಒಂದು ಸಾವಿರ ವರ್ಷ ಕದ್ರೂದೇವಿಯ ಬಂಧನದಲ್ಲಿದ್ದ ತಾಯಿಯಾದ ವಿನತೆಯನ್ನು ಬಿಡಿಸಲೋಸುಗ ಮಹಾಶಕ್ತಿಶಾಲಿಯಾದ

ಗರುಡನೂ ತನ್ನ ಮುಂದೆ ಅತೀ ಕ್ಷುದ್ರರಾದ ನಾಗರ ಸೇವೆಯನ್ನು ಮಾಡಿರುತ್ತಾನೆ. ಕಡೆಗೆ ಅಮೃತವನ್ನು ತಂದಿತ್ತರೆ ಇಬ್ಬರನ್ನೂ ಬಂಧಮುಕ್ತಗೊಳಿಸುತ್ತೇವೆ ಎಂಬ ಒಪ್ಪಂದದಂತೆ ಗರುಡ ದೇವಲೋಕದಿಂದ ಅಮೃತವನ್ನು ತಂದು ನಾಗರಿಗೆ ನೀಡುತ್ತಾನೆ. ಹೀಗೆ ಬಂಧಮುಕ್ತನಾದ ಬಳಿಕ ರೋಷದಿಂದ ಅವರೆಲ್ಲರನ್ನೂ ಕೊಂದು ತಿನ್ನಲು ಬರುತ್ತಾನೆ. ಭೀತರಾದ ನಾಗರೆಲ್ಲ ನಾಗರಾಜನಾದ ವಾಸುಕಿಗೆ ಮೊರೆ ಹೋಗುತ್ತಾರೆ. ಆಗ ವಾಸುಕಿ “ನಿನಗೆ ಪ್ರತಿನಿತ್ಯವೂ ನಮ್ಮ ಲೋಕದಲ್ಲಿ ನಾವೇ ಭೂರಿ ಆಹಾರವನ್ನು ಸಿದ್ಧಪಡಿಸಿಟ್ಟಿರುತ್ತೇವೆ, ಅದನ್ನು ಸ್ವೀಕರಿಸು, ದಯವಿಟ್ಟು ನಾಗರನ್ನು ಕೊಲ್ಲಬೇಡ” ಎಂದು ಗರುಡನನ್ನು ಪ್ರಾರ್ಥಿಸುತ್ತಾನೆ. ಆ ಪ್ರಾರ್ಥನೆಯನ್ನು ಮನ್ನಿಸಿದ ಗರುಡ ಪ್ರತಿನಿತ್ಯವೂ ನಾಗರು ತನಗಾಗಿ ಸಿದ್ಧಪಡಿಸಿಡುತ್ತಿದ್ದ ಭೂರಿ ಆಹಾರವನ್ನು ಸ್ವೀಕರಿಸುತ್ತಿರುತ್ತಾನೆ. ಒಂದು ದಿವಸ ಈ ಕಾಳಿಂಗನೆಂಬ ಸರ್ಪ ಗರುಡನಿಗಾಗಿ ಸಿದ್ಧಪಡಿಸಿಟ್ಟಿದ್ದ ಆಹಾರವನ್ನು ತಾನೇ ತಿಂದು ಬಿಡುತ್ತಾನೆ. ಗರುಡ ಬಂದಾಗ ಅಲ್ಲಿ ಆಹಾರವಿರುವದಿಲ್ಲ. ಕುಪಿತನಾದ ಗರುಡ

ನಾಗರನ್ನು ಕೊಲ್ಲ ಬಂದಾಗ ನಾಗರೆಲ್ಲರೂ ಇದು ಕಾಳಿಂಗ ಮಾಡಿದ ಕೃತ್ಯ. ಅವನನ್ನೇ ಕೊಂದು ತಿಂದುಬಿಡು ಎಂದು ಹೇಳುತ್ತಾರೆ. ಗರುಡ ಕಾಳಿಂಗನನ್ನು ಬೆನ್ನಟ್ಟಿ ಬರುತ್ತಾನೆ. ಭೀತನಾದ ಕಾಳಿಂಗ ಯಮುನೆಯ ಮಡುವನ್ನು ಸೇರಿಬಿಡುತ್ತಾನೆ. ಹಿಂದೊಮ್ಮೆ ಆ ಮಡುವಿನ ಮೇಲೆ ಗರುಡ ಹಾರುವಾಗ ಒಂದು ಮಾಂಸದ ತುಂಡು ಈ ಮಡುವಿನ ಬಳಿಯಲ್ಲಿ ಆಶ್ರಮವನ್ನು ಕಟ್ಟಿಕೊಂಡಿದ್ದ ಸೌಭರಿಗಳ ಬಳಿಯಲ್ಲಿ ಬಿದ್ದಿರುತ್ತದೆ. ಮೈಲಿಗೆಯ ಪದಾರ್ಥವನ್ನು ಕಂಡು ಕ್ರುದ್ಧರಾದ ಸೌಭರಿಗಳು ಆ ಮಡುವಿನ ಬಳಿ ಬರಬಾರದೆಂದು ಗರುಡನಿಗೆ ಶಾಪ ನೀಡಿರುತ್ತಾರೆ. ಬ್ರಾಹ್ಮಣರ ಮಾತಿಗೆ ಗೌರವ ನೀಡಬೇಕೆಂದು, ಅವರ ಶಾಪವನ್ನು ಮೀರುವ ಸಾಮರ್ಥ್ಯವಿದ್ದರೂ,  ಗರುಡ ಆ ಪ್ರದೇಶದ ಬಳಿ ಸುಳಿದಾಡುತ್ತಿರವದಿಲ್ಲ. ಹೀಗಾಗಿ ಇದು ಸುರಕ್ಷಿತ ಸ್ಥಳ ಎಂದು ತಿಳಿದ ಕಾಳಿಂಗ ಅಲ್ಲಿಗೆ ಬಂದು ಸೇರಿರುತ್ತಾನೆ. ತನ್ನ ವಿಷದಿಂದ ಆ ಮಡುವನ್ನೆಲ್ಲ ಕಲುಷಿತಗೊಳಿಸಿದ್ದಾಗ ಶ್ರೀಕೃಷ್ಣ ಅವನನ್ನು ಅಲ್ಲಿಂದ ಕಳುಹಿಸುವದಕ್ಕಾಗಿ ತಾನು ಮಡುವಿನಲ್ಲಿ ಧುಮುಕುತ್ತಾನೆ. ಪುರುಷೋತ್ತಮನ ರಭಸದ

ಜಿಗಿತಕ್ಕೆ ಉಲ್ಲೋಲಕಲ್ಲೋಲಗೊಂಡ ಮಡುವನ್ನು ಕಂಡು ಕೃಷ್ಣನನ್ನು ತನ್ನೆಲ್ಲ ಹೆಡೆಗಳಿಂದ ಈ ಕಾಳಿಂಗ ಕಚ್ಚುತ್ತಾನೆ. ಕೃಷ್ಣನಿಗೆ ಅದರಿಂದ ಯಾವುದೇ ವಿಕಾರವಾಗುವದಲ್ಲ. ತನ್ನ ಇಡಿಯ ದೇಹದಿಂದ ಕೃಷ್ಣನನ್ನು ಸುತ್ತುಗಟ್ಟಿ ಮತ್ತೆ ಮತ್ತೆ ಕಚ್ಚಲು ಮೊದಲು ಮಾಡುತ್ತಾನೆ. ಭಗವಂತ ಕಾಳಿಂಗ ತನ್ನ ಭಕ್ತ ಎನ್ನುವ ಕಾರಣಕ್ಕೆ ಅವನೆಲ್ಲ ಅಪರಾಧಗಳನ್ನೂ ಸಹಿಸಿಕೊಳ್ಳುತ್ತಿರುತ್ತಾನೆ. “ಸೇಹೇ ತಮೀಶ ಉತ ಭಕ್ತಿಮತೋಽಪರಾಧಮ್” ಇತ್ತ ಮೇಲ್ಭಾಗದಲ್ಲಿ ಕೃಷ್ಣ ಮಡುವಿಗೆ ಬಿದ್ದ ಎಂದು ಯಶೋದೆಯನ್ನು ಮೊದಲು ಮಾಡಿ ಇಡಿಯ ಗೋಕುಲ ಗೋಳಿಡಲು ಆರಂಭಿಸಿರುತ್ತದೆ. ಅನೇಕ ಭಕ್ತರು ದುಃಖದಲ್ಲಿರವದನ್ನು ಕಂಡು ಕರಗಿದ ಶ್ರೀಕೃಷ್ಣ ಕಾಳಿಂಗನಿಗೆ ಶಾಸನ ಮಾಡುವ ಇಚ್ಛೆಯಿಂದ ಮೈ ಕೊಡವಿ ಅವನ ಬಂಧನವನ್ನು ಬಿಡಿಸಿಕೊಂಡು ಅವನ ಹೆಡೆಯ ಮೇಲೆ ಕುಣಿಯಲು ಆರಂಭಿಸುತ್ತಾನೆ. ಪರಮಾತ್ಮ ನರ್ತನಕ್ಕೆ ಸಜ್ಜಾದದ್ದನ್ನು ಕಂಡು ದೇವತೆಗಳೆಲ್ಲ ಸಂತುಷ್ಟರಾಗಿ ವಾದ್ಯಗಳನ್ನು ನುಡಿಸುತ್ತಾ ಹೂಮಳೆಗೆರೆಯುತ್ತಾರೆ. ಕಾಳಿಂಗ ಪರಮಾತ್ಮನ ಪಾದಪ್ರಹಾರಕ್ಕೆ ನಲುಗಿ

ರಕ್ತಕಾರಿಕೊಳ್ಳಲಾರಂಭಿಸುತ್ತಾನೆ. ಅವನ ಪತ್ನಿಯರೆಲ್ಲಾ ಕೈಮುಗಿದು ಕೃಷ್ಣನನ್ನು ಬೇಡಿಕೊಳ್ಳುತ್ತಾರೆ. ತನಗೆ ತನ್ನನ್ನು ಕಾಪಾಡಿಕೊಳ್ಳಲು ಸಾಧ್ಯವಾಗದೇ ಇದ್ದಾಗ ಈ ಕಾಳಿಂಗ ಮನಸ್ಸಿನಲ್ಲಿಯೇ ನಾರಾಯಣನಿಗೆ ಶರಣು ಹೋಗುತ್ತಾನೆ. ಆಗ ಅವನಿಗೆ ಶ್ರೀಹರಿಯೇ ಶ್ರೀಕೃಷ್ಣ ಎಂದು ತಿಳಿಯುತ್ತದೆ. ಶ್ರೀಕೃಷ್ಣನನ್ನು ಪ್ರಾರ್ಥಿಸಿದಾಗ ಅವನ ಆಯಾಸವನ್ನೆಲ್ಲ ಪರಿಹರಿಸಿ ಸಮುದ್ರಕ್ಕೆ ಹೋಗಲು ಆದೇಶಿಸುತ್ತಾನೆ. ತನ್ನ ಪಾದಚಿಹ್ನೆ ಇರುವದರಿಂದ ನಿನಗೆ ಗರುಡನ ಭಯವಿರುವದಿಲ್ಲ ಎಂದು ಅಭಯವನ್ನೂ ನೀಡುತ್ತಾನೆ. ಬಳಿಕ ಅವನಿಂದ ಸ್ತುತನಾಗಿ ಏನೂ ನಡೆಯದವನ ಹಾಗೆ ಮೇಲೆ ಬಂದು ಯಶೋದೆ ನಂದರನ್ನು ಸಂತೋಷಗೊಳಿಸುತ್ತಾನೆ. ಹೀಗೆ ಕಾಳಿಂಗ ಮಾಡಿದ ಸ್ತೋತ್ತಮಾಪರಾಧಕ್ಕೆ ಶಿಕ್ಷೆಯನ್ನು ನೀಡಿ ಅವನನ್ನು ಮರ್ದಿಸಿದ ಕಾರಣ ಶ್ರೀಕೃಷ್ಣನನ್ನು ಕಾಳಿಂಗಮರ್ದನ ಎಂದು ಕರೆಯುತ್ತಾರೆ.

## ಅಮಿತಕರುಣಾಪಾಂಗ

ಕಣ್ಣಿನ ಕೊನೆಯ ಭಾಗಕ್ಕೆ - ಕುಡಿಗಣ್ಣಿಗೆ - ಸಂಸ್ಕೃತದಲ್ಲಿ ಅಪಾಂಗ ಎಂದು ಕರೆಯುತ್ತಾರೆ. ಕುಡಿಗಣ್ಣಿನ ನೋಟ ಎಂಬ ಅರ್ಥದಲ್ಲೂ ಅನೇಕ ಬಾರಿ ಅಪಾಂಗಪದ ಬಳಕೆಯಾದದ್ದಿದೆ. ಪರಮಾತ್ಮನ ಕರುಣಾದೃಷ್ಟಿ ಜೀವನ ಭವಬಂಧವನ್ನೇ ಕಳೆದುಬಿಡುತ್ತದೆ, ಮಾಡಿದ ಮಹಾಪರಾಧಗಳನ್ನೂ ಮನ್ನಿಸಿ ಬಿಡುತ್ತದೆ. ಕಾಳಿಂಗನನ್ನು ಮನ್ನಿಸಿದ ಹಾಗೆ. ಎಣೆಯಿರದಷ್ಟು ಕರುಣೆಯನ್ನು ಕುಡಿಗಣ್ಣಿನಿಂದಲೇ ಹರಿಸುವ ಹರಿಗೆ ಅಮಿತಕರುಣಾಪಾಂಗ ಎಂಬ ಹೆಸರು.

## ಶ್ರೀನರಸಿಂಗ

ಸಿಂಗ ಎನ್ನುವದು ಸಿಂಹ ಎನ್ನುವದರ ಅಪಭ್ರಷ್ಟರೂಪ. ಶ್ರೀನರಸಿಂಹನೇ ಶ್ರೀನರಸಿಂಗ. ಕಾಳಿಂಗ, ಪ್ರಹ್ಲಾದ, ಮನ್ಮಥ, ಪರಶಿವ, ಗರುಡ ಇವರೆಲ್ಲರ ಮೇಲೆ ಕರುಣೆಯ ಪೂರವನ್ನೇ ಹರಿಸಿದ ಓ ಶ್ರೀಹರೇ ನಮ್ಮ ಮೇಲೂ ಕರುಣೆಯನ್ನು ಹರಿಸು, ಹರಸುತ್ತಾ ಅನವರತ ನಮ್ಮನ್ನು ರಕ್ಷಿಸು ‖ ೧೦ ‖

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491